ಎಂ ವಿ ಸಿ ನಂ. 164/2020

ಪಿ ಡಬ್ಲ್ಯೂ: 1

ದಿನಾಂಕ 08-04-2022 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: 3ನೇ ಎದುರುದಾರರ ಪರ: ಶ್ರೀ ಸಿಜೆಎಂ ವಕೀಲರಿಂದ:

ಅಪಘಾತವಾದ ದಿನ ನಾನು ಬುಲೆರೋ ಕೆಎ-40 ಎಂ-3203 ರಲ್ಲಿ ಹೋಗುತ್ತಿದ್ದೆ ಎಂದರೆ ನಿಜ. ಸದರಿ ವಾಹನದಲ್ಲಿ ಒಟ್ಟು 6 ಜನರಿದ್ದೇವು. ಸದರಿ ವಾಹನದ ಮಾಲೀಕರು ಮತ್ತು ಚಾಲಕ ಯಾರೆಂದು ನನಗೆ ಗೊತ್ತಿಲ್ಲ. ಚಾಲಕನನ್ನು ನನ್ನ ಮಗ ಕರೆದುಕೊಂಡು ಬಂದಿರುತ್ತಾನೆ. ನಾವು ಆ ವಾಹನದಲ್ಲಿ ಮೈಸೂರಿನಲ್ಲಿ ಶವ ಸಂಸ್ಕಾರಕ್ಕೆಂದು ಹೋಗುತ್ತಿದ್ದೇವು. ನನ್ನ ಮಗ ರಮೇಶ ಸದರಿ ವಾಹನವನ್ನು ಬಾಡಿಗೆಗೆ ತಂದಿರುತ್ತಾನೆ. ಸದರಿ ವಾಹನಕ್ಕೆ ಎಷ್ಟು ಬಾಡಿಗೆ ಕೊಡಲಾಗಿದೆ ಎಂದು ನನಗೆ ಗೊತ್ತಿಲ್ಲ, ನನ್ನ ಮಗನಿಗೆ ಗೊತ್ತಿದೆ. ನಾವು ಹೋಗುತ್ತಿದ್ದ ಬುಲೆರೋ ವಾಹನ ಖಾಸಗಿ ವಾಹನವಾಗಿರುತ್ತದೆ ಹೊರತು ಬಾಡಿಗೆ ವಾಹನ ಅಲ್ಲ ಎಂದರೆ ಸರಿಯಲ್ಲ.

ಸದರಿ ವಾಹನವು ಟ್ಯಾಕ್ಸಿ ಅಲ್ಲದ ಕಾರಣ ಅದರಲ್ಲಿ ನಾವು ಪ್ರಯಾಣಿಕರಾಗಿ ಪ್ರಯಾಣ ಮಾಡಲು ಅವಕಾಶ ಇಲ್ಲ ಎಂದರೆ ಸರಿಯಲ್ಲ. ನನ್ನ ವೈದ್ಯಕೀಯ ವೆಚ್ಚಕ್ಕಾಗಿ 1 ಲಕ್ಷ ರೂ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಅದನ್ನು ತೋರಿಸುವ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. ನಿಪಿ-10 ರಿಂದ 12ರ ದಾಖಲೆಗಳನ್ನು ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಾಹನವನ್ನು ಬಾಡಿಗೆ ಪಡೆದು ಬಳಸಿದ್ದರಿಂದ 3ನೇ ಎದುರುದಾರರು ನನಗೆ ಪರಿಹಾರ ಕೊಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರದನ್ಯಾದಂ., ಕಡೂರು.